

# ವಿಶ್ವಕ್ಕೊಂದು ಸುತ್ತು ಸಾಲಾರ್ ಜಂಗ್

**ಈ ಮ್ಯೂಸಿಯಂನಲ್ಲಿ ಏನೆಲ್ಲ ಇದೆ ಎಂದು ಹೇಳುವುದು ಕಷ್ಟ; ಏನಿಲ್ಲ ಎಂದು ಬೇಕಿದ್ದರೆ ಸುಲಭವಾಗಿ ಹೇಳಬಹುದು!**

ಚಿತ್ರ– ಲೇಖನ: **ಎಸ್.ಎನ್.ರಾವ್, ಕಡಂದಲೆ**

ಹೈದರಾಬಾದಿನ ನಿಜಾಮರ ನವಾಬರು ದೇಶಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆಯಾಗಿರುವ ಸಾಲಾರ್ ಜಂಗ್ ವಸ್ತು ಸಂಗ್ರಹಾಲಯವನ್ನು ಇತ್ತೀಚೆಗೆ ಸಂದರ್ಶಿಸಿದಾಗ ಇಡೀ ವಿಶ್ವ ಸುತ್ತಿಬಂದಂತೆ ಭಾಸವಾಯಿತು.

ಹೈದರಾಬಾದಿನ ನಿಜಾಮರಾಗಿದ್ದ ನಝೀರ್ ಉದ್ ದೌಲಾರವರ ಪ್ರಧಾನ ಮಂತ್ರಿಯವರಾಗಿದ್ದ ಮೀರ್ ತುರಬ್ ಅಲಿ ಖಾನ್‌ರು 'ಸಾಲಾರ್ ಜಂಗ್' ಎಂಬ ಬಿರುದಾಂಕಿತರು. ದೇಶ ವಿದೇಶಗಳಿಂದ ಕೊಡುಗೆಯಾಗಿ ಪಡೆದ ಅಮೂಲ್ಯ ವಸ್ತುಗಳನ್ನು ಒಂದು ಸಂಗ್ರಹಾಲಯದಲ್ಲಿ ಇರಿಸಿದ್ದರು. ಇವರ ಮೊಮ್ಮಗ ಮೀರ್ ಯೂಸುಫ್ ಅಲಿ ಖಾನ್ 'ಮೂರನೆಯ ಸಾಲಾರ್ ಜಂಗ್' ಎಂಬ ಬಿರುದಾಂಕಿತರು. ತಮ್ಮ ಮನೆತನದ ಈ ಸಂಗ್ರಹಗಳಿಗೆ ಇನ್ನೂ ಹೆಚ್ಚಿನ ಅಮೂಲ್ಯ ವಸ್ತುಗಳನ್ನು ಸೇರಿಸುವಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿದರು. ಏಷ್ಯಾ ಮತ್ತು ಯೂರೋಪಿನ ವಿವಿಧ ದೇಶಗಳಿಂದ ತರಿಸಿಕೊಂಡ ಆಕರ್ಷಕ ವಸ್ತುಗಳನ್ನು ಮ್ಯೂಸಿಯಂ ಒಂದರಲ್ಲಿ ಕ್ರಮಬದ್ಧವಾಗಿ ಜೋಡಿಸಿಟ್ಟು ಆನಂದಿಸಿದರು. 1914ರಲ್ಲಿ ಅನಾರೋಗ್ಯ ಕಾರಣಕ್ಕಾಗಿ ಪ್ರಧಾನಮಂತ್ರಿ ಹುದ್ದೆಗೆ ರಾಜಿನಾಮೆ ನೀಡಿದ ನಂತರ, ತನ್ನ ಸಂಪೂರ್ಣ ಸಮಯವನ್ನು ಈ ವಸ್ತುಸಂಗ್ರಹಾಲಯದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡ ಮೂರನೆಯ ಸಾಲಾರ್ ಜಂಗ್‌ರವರು 40ಸಾವಿರಕ್ಕಿಂತಲೂ ಹೆಚ್ಚಿನ ವಸ್ತುಗಳನ್ನು ಹಾಗೂ 50ಸಾವಿರಕ್ಕಿಂತಲೂ ಹೆಚ್ಚಿನ ಅತ್ಯಮೂಲ್ಯ ಗ್ರಂಥಗಳನ್ನು ಸಂಗ್ರಹಿಸುವಲ್ಲಿ ಯಶಸ್ವಿಯಾದರು.

ಅವಿವಾಹಿತ ಮೂರನೆಯ ಸಾಲಾರ್ ಜಂಗ್‌ರ ಮರಣಾನಂತರ (1949) ಸಂಗ್ರಹಾಲಯವನ್ನು ನಿರ್ವಹಿಸುವುದು ಕಷ್ಟವೆಂದುಕೊಂಡ ಅವರ ಕುಟುಂಬ ಇದನ್ನು ಭಾರತ ಸರಕಾರದ ವಶಕ್ಕೆ ನೀಡಲು ತೀರ್ಮಾನಿಸಿತು. ಅದರನ್ವಯ ಹೈದರಾಬಾದ್‌ನಲ್ಲಿ ಸರಕಾರ ಮತ್ತು ಸಾಲಾರ್ ಜಂಗ್ ಕುಟುಂಬದವರ ಜಂಟಿ ಸುಪರ್ದಿಯಲ್ಲಿ ವಸ್ತು ಸಂಗ್ರಹಾಲಯ ಕಾರ್ಯನಿರ್ವಹಿಸುತ್ತಿದೆ. 1968 ರಲ್ಲಿ ಇದೊಂದು ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿತು. ಆಂಧ್ರಪ್ರದೇಶದ ರಾಜ್ಯಪಾಲರು ಈ ಸ್ವಾಯತ್ತ ಸಂಸ್ಥೆಯ ಮುಖ್ಯಸ್ಥರು.

## ಏನೇನಿಲ್ಲ!

ಈ ವಸ್ತು ಸಂಗ್ರಹಾಲಯದಲ್ಲಿ ಏನಿದೆ ಎನ್ನುವುದಕ್ಕಿಂತ, ಏನಿಲ್ಲ ಎಂದು ಕೇಳುವುದೇ ಒಳ್ಳೆಯದು. ದೇಶ ವಿದೇಶಗಳ ಕಲೆಗಳಿಗೆ ಒಂದು ವೇದಿಕೆಯಂತಿರುವ ಇಲ್ಲಿ, ಲೋಹ, ಮರ, ಪಿಂಗಾಣಿ, ಅಮೃತಶಿಲೆ, ದಂತ, ರೇಶ್ಮೆ, ಮಣ್ಣು, ಗಾಜು, ರತ್ನಗಂಬಳಿ, ಹೀಗೆ ಹಲವಾರು ಮಾಧ್ಯಮಗಳಲ್ಲಿನ ಕೆತ್ತನೆ, ಶಿಲ್ಪಕಲೆಗಳನ್ನು ಕಾಣಬಹುದು. ಯೂರೋಪಿನಿಂದ ತರಿಸಿದ ಅಮೃತಶಿಲೆಯ ಶಿಲ್ಪಗಳು ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸುತ್ತವೆ. ಮುಸುಕಿನ